ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 17-11-1969.

(ओम शान्ति, बापदादा. अव्यक्त मुरली 17-11-1969)

***ಭೂಮಿಯಿಂದ(ವ್ಯಕ್ತ) ಅಕಾಶದೆಡೆಗೆ(ಅವ್ಯಕ್ತ) ಹೋಗುವ ಯುಕ್ತಿಗಳು***

( फर्श से अर्श पर जाने की युक्तियाँ)

ಭಟ್ಟಿಯಲ್ಲಿ ಏತಕ್ಕಾಗಿ ಬಂದಿರುವಿರಿ? (ದೇಹದಲ್ಲಿರುತ್ತಾ ವಿದೇಹಿಯಾಗಿರುವ ಅಭ್ಯಾಸ ಮಾಡಲು). ಇಲ್ಲಿ ಕಾಲಿಟ್ಟ ತಕ್ಷಣದಿಂದಲೇ ಈ ಸ್ಥಿತಿಯಾಗಬೇಕು. ಲಕ್ಷ್ಯ ವಿದ್ದಂತೆ ಅದನ್ನು ಪೂರ್ಣ ಮಾಡಲು ಅಭ್ಯಾಸ ಮತ್ತು ಗಮನ (attention) ಬೇಕು. ಬಾಪ್ ದಾದಾ ಪ್ರತಿಯೊಬ್ಬರನ್ನೂ ಹೊಸ ವಿಚಾರವನ್ನು ಕೊಡಲು ಕರೆಯುತ್ತಾರೆ. ಅದರ್ ಕುಮಾರರನ್ನು ವಿಶೇಷವಾಗಿ ತಮ್ಮ ಗ್ರಹಸ್ಥ ವ್ಯವಹಾರದಲ್ಲಿ ಏರಿದ ಉಲ್ಟಾ ಏಣಿಯಿಂದ ಕೆಳಗೆ ಇಳಿಯಲು ಮತ್ತು ಉಲ್ಟಾ ಏಣಿಯಿಂದ ಇಳಿದು ಹೇಗೆ ಏರಬೇಕು? ಎಂಬುದನ್ನು ತಿಳಿಸಲು ಕರೆಯಲಾಗಿದೆ. ಭೂಮಿಯಿಂದ ಆಕಾಶಕ್ಕೆ ಮತ್ತೆ ಆಕಾಶದಿಂದ ಭೂಮಿಗೆ, *ಉಲ್ಟಾ ಏಣಿಯ ಅಲ್ಪಸ್ವಲ್ಪ ಜ್ಞಾನದಿಂದ ಅಜ್ಞಾನಿಗಳಾಗಲು ಮತ್ತು ಸತ್ಯಜ್ಞಾನದ ಪರಿಚಯ ಕೊಟ್ಟು ಜ್ಞಾನಸ್ವರೂಪ ಮಾಡಲು ಕರೆಯಲಾಗಿದೆ.* ಮೊದಲು ಇಳಿಯುವುದು ನಂತರ ಏರುವುದು. ಎಲ್ಲಿಯವರೆಗೆ ಪೂರ್ಣ ಇಳಿವುದಿಲ್ಲವೋ ಅಲ್ಲಿಯವರೆಗೆ ಏರಲೂ ಸಾಧ್ಯವಿಲ್ಲ. ಎಲ್ಲ ಮಾತುಗಳಲ್ಲಿ ತಮ್ಮನ್ನು ತಾವು ಇಳಿಸಿಕೊಳ್ಳಲು ಸಿದ್ಧರಿರುವಿರಾ? ಎಷ್ಟು ದೊಡ್ಡ ಏಣಿಯಿಂದ ಇಳಿಯುವುದು? ಉಲ್ಟಾ ಏಣಿ ಎಷ್ಟು ಉದ್ದವಿದೆ? ಇಲ್ಲಿಯವರೆಗೆ ಯಾವ ಪುರುಷಾರ್ಥ ಮಾಡಿರುವಿರೋ ಅದರಲ್ಲಿ ಪೂರ್ಣ ಏಣಿಯನ್ನು ಇಳಿದಿದ್ದೀರಿ ಎಂದು ತಿಳಿಯುತ್ತೀರೋ ಅಥವಾ ಇನ್ನೂ ಇಳಿಯುತ್ತಿದ್ದೇವೆ ಎಂದು ತಿಳಿಯುತ್ತೀರೋ? ಪೂರ್ಣ ಇಳಿದಾಗ ಏರಲು ತಡವಾಗುವುದಿಲ್ಲ ಆದರೆ ಇಳಿಯುತ್ತಾ ಇಳಿಯುತ್ತಾ ಅಲ್ಲಲ್ಲಿ ನಿಲ್ಲುತ್ತೀರಿ. ಯಾವ ಉದ್ದೇಶದಿಂದ ಕರೆಯಲಾಗಿದೆಯೆಂದು ತಿಳಿಯಿತೇ? 63 ಜನ್ಮಗಳಲ್ಲಿ ಏರಿದ ಉಲ್ಟಾ ಏಣಿಯನ್ನು ಈಗ ಪೂರ್ಣ ಇಳಿಯಬೇಕು ಮತ್ತೆ ಏರಬೇಕು. ಇಳಿಯುವುದು ಸಹಜವೋ ಅಥವಾ ಏರುವುದು ಸಹಜವೋ? ಇಳಿಯುವುದು ಸಹಜವೋ ಅಥವಾ ಕಠಿಣವೋ? ಈಗ ತಾವು ಇಳಿದು ಏರುವ ಪುರುಷಾರ್ಥವನ್ನು ಮಾಡುತ್ತಿರುವಿರಾ ಅಥವಾ ಏರುವ ಪುರುಷಾರ್ಥವನ್ನು ಮಾಡುತ್ತಿರುವಿರಾ? ಇಳಿಯಬೇಕಾದ ಕೊನೆಯ ಮೆಟ್ಟಿಲು ಯಾವುದೆಂದು ಗೊತ್ತೇ? ಈ ದೇಹದ ಅಭಿಮಾನವನ್ನು ಬಿಡುವುದು, ಹೇಗೆ ಶರೀರದ ವಸ್ತ್ರವನ್ನು ಬಿಚ್ಚುವುದು ಸಹಜವೋ ಹಾಗೆಯೇ ಈ ಶರೀರ ರೂಪಿ ವಸ್ತ್ರವನ್ನು ಸಹಜವಾಗಿ ಬಿಚ್ಚುವುದು ಮತ್ತು ಸಹಜವಾಗಿ ಸಮಯಕ್ಕನುಸಾರ ಧಾರಣೆ ಮಾಡುವುದು, ಈ ಅಭ್ಯಾಸವನ್ನು ಪೂರ್ಣ ರೀತಿಯಿಂದ ಕಲಿಯಬೇಕು. ಆದರೆ ಕೆಲವರಲ್ಲಿ ಈ ದೇಹಾಭಿಮಾನ ಏಕೆ ಹೋಗುವುದಿಲ್ಲ? ಈ ದೇಹರೂಪಿ ವಸ್ತ್ರ ಏಕೆ ಸಹಜವಾಗಿ ಕಳಚಲಾಗುವುದಿಲ್ಲ ಯಾರ ವಸ್ತ್ರ ಬಿಗಿಯಾಗಿದೆಯೋ ಅವರು ಬಿಚ್ಚಾಲಾರರು. ಇದೂ ಹಾಗೆಯೇ ಇದೆ. ಯಾವುದಾದರೂ ಸಂಸ್ಕಾರದಲ್ಲಿ ಒಂದು ವೇಳೆ ಈ ದೇಹದ ವಸ್ತ್ರ ಅಂಟಿಕೊಂಡಿದ್ದರೆ ಅರ್ಥಾತ್ ಬಿಗಿಯಾಗಿದ್ದರೆ ಆಗ ಬಿಚ್ಚಲಾಗುವುದಿಲ್ಲ. ಇಲ್ಲವಾದರೆ ವಸ್ತ್ರವನ್ನು ಧರಿಸುವುದು ಮತ್ತು ಬಿಚ್ಚುವುದು ಸಹಜವಾಗಿರುವಂತೆ ಇಳಿಯುವುದು, ಏರುವುದು ಅಥವಾ ಈ ದೇಹ ರೂಪಿ ವಸ್ತ್ರವನ್ನು ಧರಿಸುವುದು ಮತ್ತು ಬಿಚ್ಚುವುದು ಬಹಳ ಸಹಜವಾಗಿದೆ. ಆದ್ದರಿಂದ ಈ ದೇಹ ರೂಪಿ ವಸ್ತ್ರ ಯಾವ ಸಂಸ್ಕಾರಕ್ಕೆ ಅಂಟಿಕೊಂಡಿದೆ ಎಂಬುದನ್ನೇ ನೋಡಬೇಕಾಗಿದೆ. ಯಾವಾಗ ಎಲ್ಲಾ ಸಂಸ್ಕಾರಗಳಿಂದ ಅತೀತ(ನಿರ್ಲಿಪ್ತ)ರಾಗುವಿರೋ ಆಗ ಸ್ಥಿತಿಯೂ ಅತೀತವಾಗುವುದು. ಆದ್ದರಿಂದ ಬಾಪ್ ದಾದಾ ಅವರೂ ಅನೇಕ ಬಾರಿ ಎಲ್ಲಾ ಮಾತುಗಳಿಂದ ಸಹಜವಾಗಿರಿ ಎಂದು ತಿಳಿಸುತ್ತಾರೆ. ಯಾವಾಗ ತಾವು ಎಲ್ಲಾ ಮಾತುಗಳಲ್ಲಿ ಸಹಜವಾಗಿರುವಿರೋ ಆಗ ಎಲ್ಲಾ ಕಾರ್ಯಗಳೂ ಸಹಜವಾಗುವವು. ತಮ್ಮನ್ನು (ಸಂಸ್ಕಾರಗಳನ್ನು) ಬಿಗಿಗೊಳಿಸಿಕೊಂಡಾಗ ಕಾರ್ಯದಲ್ಲಿಯೂ ಬಿಗಿ ಬರುವುದು. ಹಾಗೇ ನೋಡಿದರೆ ಇಷ್ಟು ಸಮಯದಿಂದ ಪುರುಷಾರ್ಥ ಮಾಡುವವರಿಗೆ ಈಗ ಕರ್ತವ್ಯದಲ್ಲಿ ಬಹಳ ನಿರ್ಲಿಪ್ತತೆ ಬಂದಿರಲೇಬೇಕು. ಈಗ ಈ

ಭಟ್ಟಿಯಲ್ಲಿ ಯಾವುದೇ ತರಹದ (ಸಂಸ್ಕಾರದ) ಬಿಗಿತವನ್ನು ತೆಗೆದು ಏರಿದ ಉಲ್ಟಾ ಏಣಿಯ ಉಳಿದ ಮೆಟ್ಟಿಲುಗಳನ್ನು ಇಳಿಯಬೇಕು ಮತ್ತು ಲಿಫ್ಟ್ (lift) ನಲ್ಲಿ ಏರಬೇಕು. ಆದರೆ ಲಿಫ್ಟ್ ನಲ್ಲಿ ಹತ್ತಲು ಏನು ಮಾಡಬೇಕಾಗುತ್ತದೆ? ಲಿಫ್ಟ್ ನಲ್ಲಿ ಯಾರು ಹೋಗಲು ಸಾಧ್ಯ?

ತಂದೆಗೆ ಇಡೀ ಪ್ರಪಂಚದಲ್ಲಿ ಯೋಗ್ಯ ಮಕ್ಕಳೇ ಶ್ರೇಷ್ಠ ಉಡುಗೊರೆ. ಆದ್ದರಿಂದ ಲಿಫ್ಟನಲ್ಲಿ ಏರಲು ತಂದೆಯ ಉಡುಗೊರೆಯಾಗಬೇಕು ಮತ್ತು ಏನಿದೆಯೋ ಅದೆಲ್ಲವನ್ನೂ ಉಡುಗೊರೆಯಾಗಿ ಕೊಡಬೇಕು. ಉಡುಗೊರೆಯನ್ನೂ ಕೊಡಬೇಕು ಮತ್ತು ತಂದೆಯ ಉಡುಗೊರೆಯಾಗಿ ತಯಾರು ಕೂಡ ಆಗಬೇಕು. ಆಗ ಲಿಫ್ಟ್ ನಲ್ಲಿ ಕುಳಿತುಕೊಳ್ಳಲು ಸಾಧ್ಯ. ತಿಳಿಯಿತೆ? ಉಡುಗೊರೆಯನ್ನು ಕೊಟ್ಟಿದ್ದೀರಿ ಮತ್ತು ಉಡುಗೊರೆಯಾಗಿದ್ದೀರಿ ಎಂಬ ಈ ಎರಡೂ ಕೆಲಸಗಳನ್ನು ಎಷ್ಟು ಮಾಡಿದ್ದೀರಿ ಎಂಬುದನ್ನು ನೋಡಬೇಕು. ಉಡುಗೊರೆಯನ್ನು ಬಹಳ ಜೋಪಾನವಾಗಿ ಶೋಕೇಸ್ ನಲ್ಲಿ ಶೃಂಗರಿಸಿ ಇಡಲಾಗುತ್ತದೆ. ಯಾವ ತರಹದ ಉಡುಗೊರೆಯೋ ಹಾಗೆ ಮುಂದೆ ಇಡಲಾಗುತ್ತದೆ. ತಾವೆಲ್ಲರೂ ತಮ್ಮನ್ನು ತಾವು ಎಂತಹ ಗಿಫ್ಟಂತೆ ತಯಾರು ಮಾಡಿಕೊಳ್ಳಬೇಕೆಂದರೆ ಲಿಫ್ಟ್ ಸಿಗುವಂತಹ ಮತ್ತು ಈ ಸೃಷ್ಟಿಯ ಶೋಕೇಸ್ ನಲ್ಲಿ ಎಲ್ಲರಿಗಿಂತ ಮುಂದೆ ಇರುವಂತೆ. ಶೋಕೆಸ್ ನಲ್ಲಿ ಎಲ್ಲರಿಗಿಂತ ಮುಂದಿರಲು ಆದರ್ ಕುಮಾರರು ಎರಡು ಮುಖ್ಯ ಮಾತುಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು.ಶೋಕೆಸ್ನಲ್ಲಿ ಇಡುವ ವಸ್ತುಗಳ ವಿಶೇಷತೆ ಏನು? ತಮ್ಮನ್ನು ತಾವು ಆಕರ್ಷಣೀಯ(attractive) ಮಾಡಿಕೊಳ್ಳುವುದು ಮತ್ತು ಚುರುಕು (ಸುಸ್ತು ಇಲ್ಲದಿರುವುದು active) ಮಾಡಿಕೊಳ್ಳಬೇಕು. ಈ ಎರಡೂ ವಿಶೇಷತೆಗಳನ್ನು ಆದರ್ ಕುಮಾರರು ತಮ್ಮಲ್ಲಿ ಧಾರಣೆ ಮಾಡಿಕೊಳ್ಳಬೇಕು. ಈ ಎರಡು ಗುಣಗಳು ಬಂದರೆ ಮತ್ತೇನೂ ಉಳಿಯುವುದಿಲ್ಲ. ಕೆಲವೆಡೆ ಚುರುಕಾಗಿರುವುದರಲ್ಲಿ ಕೊರತೆಯಿದೆ. ಆದ್ದರಿಂದ ಈ ಭಟ್ಟಿಯಲ್ಲಿ ವಿಶೇಷವಾಗಿ ಯಾವ ಗುರುತು(ಛಾಪು) ಹಾಕಿಕೊಂಡು ಹೋಗುವಿರಿ? ಇವೇ ಎರಡು ಶಬ್ದಗಳು ಆಕ್ಟಿವ್ ಮತ್ತು ಆಕರ್ಷಣೀಯ. ಈ ಛಾಪು ಹಾಕಿಕೊಂಡು ಹೋದರೆ ತಮ್ಮ ಕಾರ್ಯಾಚರಣೆ(activity)  ಬದಲಾಗುವುದು. ಎಷ್ಟೆಷ್ಟು ಈ ಛಾಪು ಪಕ್ಕಾ ಹಾಕಿಕೊಂಡು ಹೋಗುವಿರೋ ಅಷ್ಟಷ್ಟು ತಮ್ಮ ಕಾರ್ಯಾಚರಣೆ ಪಕ್ಕಾ ಮತ್ತು ಬದಲಾಗಿರುವಂತೆ ಕಂಡು ಬರುವುದು. ಒಂದು ವೇಳೆ ಗುರುತು ಸಡಿಲವಾಗಿದ್ದರೆ ಕಾರ್ಯದಲ್ಲಿ ಬದಲಾವಣೆ ಕಂಡು ಬರುವುದಿಲ್ಲ.

ಭಟ್ಟಿಯಲ್ಲಿ ಬರುವುದೆಂದರೆ ತಮ್ಮ ರೂಪ ಮತ್ತು ರಂಗನ್ನು ಬದಲಾಯಿಸಿಕೊಂಡು ಹೋಗುವುದು ಎಂದು ಭಟ್ಟಿಯಲ್ಲಿ ಯಾವ ವಸ್ತು ಬೀಳುತ್ತದೆಯೋ ಅದರ ದುರ್ಬಲತೆ ಸುಟ್ಟು ಹೋಗುತ್ತದೆ. ಮೂಲ ರೂಪ, ಕರ್ತವ್ಯಗಳನ್ನೂ ಇಲ್ಲಿಂದ ತೆಗೆದುಕೊಂಡು ಹೋಗಿ, ಅದು ಯಾವ ರೂಪವಾಗಿದೆ? ಏನನ್ನು ಬದಲಾಯಿಸುವಿರಿ? ಈಗಾಗಲೇ ಬಣ್ಣವನ್ನು ಬದಲಿಸುತ್ತಿರುತ್ತೀರಿ ನಂತರ ಯಾವುದರ ಮೇಲೆ ಬೇರೆ ಯಾವ ಬಣ್ಣವೂ ಹತ್ತಲಾರದೋ ಮತ್ತು ಯಾವ ಬಣ್ಣವನ್ನು ಯಾರೂ ಅಳಿಸಲಾರರೋ ಮತ್ತು ಅಳಿಸಿಹೋಗುವುದಿಲ್ಲವೋ ಅಂತಹ ಒಂದೇ ಬಣ್ಣ ಗಟ್ಟಿಯಾಗಿ ಹತ್ತುವುದು. ಎಲ್ಲಾ ಮಾತುಗಳಲ್ಲಿ ಚುರುಕಾಗಿರಬೇಕು, ಎಂತಹ ಸಮಯ ಮತ್ತು ಸೇವೆಯಾಗಲಿ ಅದರಲ್ಲಿ ಸದಾಸಿದ್ಧವಾಗಿರಬೇಕು. ಯಾವುದೇ ಕಾರ್ಯವಿದ್ದರೂ ಚುರುಕಾಗಿರುವವರು ಅದನ್ನು ಶೀಘ್ರವಾಗಿ ತಿಳಿದುಕೊಂಡು ಸಫಲತೆಯನ್ನು ಪಡೆದುಕೊಳ್ಳುವರು. ಚುರುಕಿಲ್ಲದವರು ಮೊದಲು ಕಾರ್ಯದ ಬಗೆಗೆ ಯೋಚಿಸುತ್ತಾರೆ, ಯೋಚಿಸುತ್ತಾ ಸಮಯವನ್ನು ವ್ಯರ್ಥವಾಗಿ ಕಳೆಯುವರು, ಸಫಲತೆಯೂ ಸಿಗುವುದಿಲ್ಲ. ಚುರುಕಾಗಿರುವುದು ಎಂದರೆ ಸದಾಸಿದ್ಧ ಮತ್ತು ಪ್ರತಿಯೊಂದು ಕಾರ್ಯವನ್ನು ಪರೀಕ್ಷಿಸುವುದು ಮತ್ತು ಅದನ್ನು ಮಾಡಿ ಸಫಲತೆಯನ್ನು ಪಡೆದುಕೊಳ್ಳುವುದು. ಈ ಮೂರೂ ಮಾತುಗಳು ಅದರಲ್ಲಿರುವವು. ಯಾರ ಮೇಲೆ ಭಾರವಿದೆಯೋ ಅವರನ್ನು ಆಕ್ಟಿವ್ ಎನ್ನಲಾಗುವುದಿಲ್ಲ. ಅವರು ಪುರುಷಾರ್ಥದಲ್ಲಿ, ತಮ್ಮ ಸಂಸ್ಕಾರಗಳಲ್ಲಿ ಭಾರದ ಅನುಭವ ಮಾಡುವರು, ಚುರುಕಾಗಿರುವವರು ಸದಾಸಿದ್ಧ ಹಾಗೂ ಸರಳವಾಗಿರುವರು. ತಾವು ಸರಳವಾಗಿರುವುದರಿಂದ ಎಲ್ಲ ಕಾರ್ಯಗಳು, ಪುರುಷಾರ್ಥ ಸರಳವಾಗುವವು. ಸ್ವತಃ ಸರಳವಾಗಿ ಇಲ್ಲದಿರುವುದರಿಂದ ಪುರುಷಾರ್ಥ ಮತ್ತು ಸೇವೆ ಎರಡೂ ಸರಳವಾಗಿರುವುದಿಲ್ಲ. ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಸೇವೆ ಕಠಿಣವಲ್ಲ ಆದರೆ ತಮ್ಮ ಸಂಸ್ಕಾರ, ದುರ್ಬಲತೆಗಳು ಕಠಿಣತೆಯ ರೂಪದಲ್ಲಿ ಕಂಡುಬರುತ್ತವೆ. ಪುರುಷಾರ್ಥವೂ ಕಷ್ಟಕರವಲ್ಲ. ತಮ್ಮ ದುರ್ಬಲತೆಗಳು ಕಠಿಣ ಮಾಡುತ್ತವೆ. ಇಲ್ಲವಾದರೆ ಕೆಲವರಿಗೆ ಸಹಜ, ಕೆಲವರಿಗೆ ಕಠಿಣ ಏಕೆ ಅನಿಸುತ್ತದೆ? ಒಂದು ವೇಳೆ ಕಠಿಣವಾಗಿದ್ದರೆ ಎಲ್ಲರಿಗೂ ಎಲ್ಲ ಮಾತುಗಳು

ಕಠಿಣವಾಗಬೇಕು. ತಮ್ಮ ಬಲಹೀನತೆಗಳು ಸಮಸ್ಯೆಯ ರೂಪದಲ್ಲಿ ಬರುತ್ತವೆ. ಆದ್ದರಿಂದ ಈ ಎರಡು ಮಾತುಗಳನ್ನು ಧಾರಣೆ ಮಾಡಿಕೊಳ್ಳಬೇಕು.

ತಮ್ಮಲ್ಲಿ ವಿಶೇಷತೆಗಳಿರುವಾಗ ಆಕರ್ಷಣೀಯರಾಗಿರುವಿರಿ, ಆಕರ್ಷಿತರಾಗಲು ಹರ್ಷಿತರಾಗಿರಬೇಕು. *ಅತೀಂದ್ರಿಯ ಸುಖದಲ್ಲಿ ಉಯ್ಯಾಲೆಯಾಡುವುದೇ ಹರ್ಷಿತತೆಯ ಅರ್ಥವಾಗಿದೆ. ಜ್ಞಾನವನ್ನು ಸ್ಮರಣೆ ಮಾಡಿ ಮತ್ತು ಅವ್ಯಕ್ತ ಸ್ಥಿತಿಯ ಅನುಭವ ಮಾಡುತ್ತಾ ಅತೀಂದ್ರಿಯ ಸುಖದಲ್ಲಿರುವುದನ್ನು ಹರ್ಷಿತತೆ ಎಂದು ಹೇಳುತ್ತಾರೆ.* ತನು-ಮನಗಳಿಂದ ಹರ್ಷಿತರಾಗಿರುವವರೇ ಆಕರ್ಷಿತರಾಗಿರುವರು. ಪ್ರಕೃತಿ ಮತ್ತು ಮಾಯೆಗೆ ಅಧೀನರಾಗದೇ ಇವೆರಡನ್ನೂ ಅಧೀನ ಮಾಡಿಕೊಳ್ಳಬೇಕು. ಅಧೀನರಾಗುವ ಕಾರಣ ಅಧಿಕಾರವನ್ನು ಕಳೆದುಕೊಳ್ಳುತ್ತೀರಿ. ಆದ್ದರಿಂದ ಅಧೀನರಾಗಬಾರದು, ಅಧೀನ ಮಾಡಿಕೊಳ್ಳಬೇಕು ಆಗ ತಮ್ಮ ಅಧಿಕಾರವನ್ನು ಪಡೆದುಕೊಳ್ಳುವಿರಿ ಮತ್ತು ಎಷ್ಟು ಅಧಿಕಾರ ಪಡೆದುಕೊಳ್ಳುವಿರೋ ಅಷ್ಟು ಪ್ರಕೃತಿ ಮತ್ತು ಜನರಿಂದ ಸತ್ಕಾರವಾಗುವುದು, ಸತ್ಕಾರ ಮಾಡಿಸಿಕೊಳ್ಳಲು ಏನು ಮಾಡಬೇಕು? ಅಧೀನತೆಯನ್ನು ಬಿಟ್ಟು ತಮ್ಮ ಅಧಿಕಾರವನ್ನಿಟ್ಟುಕೊಳ್ಳಬೇಕು. ಆದರೆ ಅಧಿಕಾರವನ್ನು ಬಿಟ್ಟು ಅಧೀನರಾಗುತ್ತೀರಿ. ಸಣ್ಣ ಸಣ್ಣ ಮಾತುಗಳಲ್ಲಿ, ತಮ್ಮದೇ ರಚನೆಗೆ ಅಧೀನರಾಗುತ್ತೀರಿ. ಲೌಕಿಕ ಮಕ್ಕಳಿದ್ದಾರೆ ಆದರೆ ತಮ್ಮದೇ ರಚನೆಯೆಂದರೆ ಸಂಕಲ್ಪಗಳಿಗೆ ಅಧೀನರಾಗುತ್ತೀರಿ. ಹೇಗೆ ಲೌಕಿಕ ರಚನೆಯಿಂದ ಅಧೀನರಾಗುವಿರೋ ಅದೇ ರೀತಿ ತಮ್ಮ ರಚನೆಯಾದ ಸಂಕಲ್ಪಗೂ, ಕರ್ಮೇಂದ್ರಿಯಗಳಿಗೂ ಅಧೀನರಾಗುತ್ತೀರಿ. ಅಧೀನರಾಗುವುದರಿಂದಲೇ ತಮ್ಮ ಜನ್ಮಸಿದ್ಧ ಅಧಿಕಾರವನ್ನು ಕಳೆದುಕೊಳ್ಳುತ್ತೀರಿ. ಮಕ್ಕಳಾಗಿರುವಿರಿ ಎಂದರೆ ಅಧಿಕಾರಿಗಳು, *ಸರ್ವದಾ ಸುಖ, ಶಾಂತಿ ಮತ್ತು ಪವಿತ್ರತೆಯು ನಮ್ಮ ಜನ್ಮಸಿದ್ಧ ಅಧಿಕಾರ ಎಂದು ಹೇಳುತ್ತೀರಲ್ಲವೇ?* ತಮ್ಮನ್ನು ತಾವೇ ಕೇಳಿಕೊಳ್ಳಿ ತಂದೆಗೆ ಮಕ್ಕಳಾದಿರಿ ಮತ್ತು ಪವಿತ್ರತೆ, ಸುಖ, ಶಾಂತಿಯ ಅಧಿಕಾರ ಪಡೆದು ಕೊಂಡಿದ್ದೇವೆಯೇ? ಅಧಿಕಾರ ಬಿಟ್ಟು ಹೋದರೆ ಯಾವುದಾದರೂ ಮಾತಿಗೆ ಅಧೀನರಾಗುತ್ತೀರಿ. ಆದ್ದರಿಂದ ಈಗ ಅಧೀನತೆಯನ್ನು ಬಿಡಿ, ತಮ್ಮ ಜನ್ಮಸಿದ್ಧ ಅಧಿಕಾರವನ್ನು ಪ್ರಾಪ್ತಿಮಾಡಿಕೊಳ್ಳಿ. **ಯಾವಾಗ ಪ್ರಭಾವ ಬೀಳುತ್ತದೆ ಎಂದು ಕೇಳುತ್ತೀರಲ್ಲವೇ? ಈ ಪ್ರಭಾವ ಬೀಳದೇ ಇರಲು ಕಾರಣವೇನು? ಏಕೆಂದರೆ ಇಲ್ಲಿಯವರೆಗೆ ಅನೇಕ ಮಾತುಗಳಲ್ಲಿ ತಾವೇ ಪ್ರಭಾವಿತರಾಗುತ್ತಿರುತ್ತೀರಿ. ಯಾರು ಸ್ವತಃ ಪ್ರಭಾವಿತರಾಗುತ್ತಾ ಇರುತ್ತಾರೆಯೋ ಅವರ ಪ್ರಭಾವ ಬೀಳುವುದಿಲ್ಲ. ಪ್ರಭಾವ ಬೇಕಿದ್ದರೆ ಈ ಎಲ್ಲ ಮಾತುಗಳಿಂದ ಪ್ರಭಾವಿತರಾಗಬಾರದು.** ಆಗ ಎಷ್ಟು ಬೇಗನೇ ಪ್ರಭಾವ ಬೀಳುತ್ತದೆ ಎಂದು ನೋಡಿ ತಮ್ಮ ಕಾರ್ಯಾಚರಣೆಯಿಂದ ಅಂದಾಜು ಮಾಡಬಹುದು. ಇಂತಹ ಸೌಭಾಗ್ಯ ಇಡೀ ಕಲ್ಪದಲ್ಲಿ ಒಂದೇ ಬಾರಿ ಸಿಗುತ್ತದೆ. ಸತ್ಯಯುಗದಲ್ಲಿ ಲೌಕಿಕವಾಗಿ ತಂದೆಯೊಂದಿಗೆ ಇರುವಿರಿ. ಪಾರಲೌಕಿಕ ತಂದೆಯ ಜೊತೆಗೆ ಇರುವುದಿಲ್ಲ. 84 ಜನ್ಮಗಳಲ್ಲಿ ಎಷ್ಟು ಶೃಂಗಾರ ಮಾಡಿ ಕೊಂಡಿರಬಹುದು. ಭಿನ್ನ ಭಿನ್ನ ಪ್ರಕಾರದ ಬಹಳ ಶೃಂಗಾರ ಮಾಡಿಕೊಂಡಿರಬಹುದಲ್ಲವೇ? ಬಾಪ್ ದಾದಾರ ಸ್ನೇಹವಂತೂ ಮಕ್ಕಳನ್ನು ಶೃಂಗಾರ ಮಾಡಿ ಸೃಷ್ಟಿಯ ಮುಂದೆ ಶೋಕೇಸ್ ನಲ್ಲಿ ಇಡುವುದಾಗಿದೆ, ಎಲ್ಲರೂ ಸಂಪೂರ್ಣರಾಗಿ ಶೋಕೇಸ್ ಎಂದರೆ ವಿಶ್ವದ ಮುಂದೆ ಬಂದಾಗ ಎಷ್ಟು ಶೃಂಗರಿಸಲ್ಪಟ್ಟಿರುವರು? ಸತ್ಯಯುಗದ ಶೃಂಗಾರವಲ್ಲ, ಗುಣಗಳ ಆಭರಣವನ್ನು ಧಾರಣೆ ಮಾಡಬೇಕು.

ಅವ್ಯಕ್ತ ಮುರಳಿ 17-11-1969.

***ಭೂಮಿಯಿಂದ ಆಕಾಶದೆಡೆಗೆ ಹೋಗುವ ಯುಕ್ತಿಗಳು***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಏಣಿಯನ್ನು ಇಳಿಯುವ/ ಉಲ್ಟಾ ಏಣಿಯನ್ನು ಹತ್ತುವ (ಮೆಟ್ಟಿಲು ಚಿತ್ರ) ಜ್ಞಾನದ ಅಜ್ಞಾನಿ.

2. ನಾನು ದೇಹವೆಂಬ ವಸ್ತ್ರದೊಂದಿಗೆ ನನ್ನ ಸಂಸ್ಕಾರಗಳೆಲ್ಲವನ್ನು ಅತೀತವಾಗಿಸಿಕೊಂಡು ಎಲ್ಲಾ ವಿಷಯಗಳಲ್ಲಿ ಸರಳವಾಗಿದ್ದೇನೆ.

3. ನಾನು ಉಲ್ಟಾ ಏಣಿಯನ್ನು ಇಳಿದು ಯೋಗ್ಯವಾಗಿ ತಯಾರಾಗಿದ್ದೇನೆ.

4. ನಾನು ಈ ಸೃಷ್ಟಿ ಎಂಬ ಶೋಕೇಸ್ ನಲ್ಲಿ ಎಲ್ಲರಿಗಿಂತಲೂ ಮುಂದೆ ಇರುವ ಮತ್ತು ಲಿಫ್ಟನ್ನು ಹೊಂದಿರುವ ತಂದೆಯ ಗಿಫ್ಟ್ (ಉಡುಗೊರೆ) ಆಗಿದ್ದೇನೆ.

5. ನಾನು ತಂದೆಯಿಂದ ಆಕರ್ಷಣೀಯವಾಗಿ ಮತ್ತು ಚುರುಕಾಗಿ ಇರುವ ಮುದ್ರೆಯನ್ನು ಹಾಕಿಸಿಕೊಂಡಿರುವ ದೃಢ ಮತ್ತು ಪರಿವರ್ತನಾ ಸ್ವರೂಪ.

6. ನಾನು ಪ್ರತಿಯೊಂದು ಕಾರ್ಯವನ್ನು ಮೂರು ವಿಶೇಷತೆಗಳೊಂದಿಗೆ ಪೂರ್ತಿ ಮಾಡಿದ್ದೇನೆ. (ವಿಶೇಷತೆಗಳು -ಚುರುಕಾಗಿ, ಕಾರ್ಯದಲ್ಲಿ ಸಮಾವೇಶವಾಗಿ, ಸಫಲತೆಯನ್ನು ಹೊಂದಿ).

7. ನಾನು ನನ್ನ ಸಂಸ್ಕಾರಗಳು ಮತ್ತು ದುರ್ಬಲತೆಗಳನ್ನು ಸಮಾಪ್ತಿ ಮಾಡಿ ಪ್ರತಿಯೊಂದು ಸೇವೆ ಮತ್ತು ಪುರುಷಾರ್ಥವನ್ನು ಸರಳವಾಗಿ ಮಾಡಬಲ್ಲ ಈಶ್ವರೀಯ ಸೇವಾಧಾರಿ.

8. ನಾನು ಅತೀಂದ್ರೀಯ ಸುಖದಲ್ಲಿ ಉಯ್ಯಾಲೆಯಾಡುತ್ತಾ, ಅವ್ಯಕ್ತ ಸ್ಥಿತಿಯಲ್ಲಿ ಅತೀಂದ್ರೀಯ ಸುಖವನ್ನು ಅನುಭವ ಮಾಡುವ ಹರ್ಷಿತತೆಯ ಸ್ವರೂಪ.

9. ನಾನು ನನ್ನ ರಚನೆ, ಸಂಕಲ್ಪದ ಮೇಲೆ ಅಧಿಕಾರವನ್ನು ಇಟ್ಟುಕೊಂಡ ಕರ್ಮೇಂದ್ರೀಯಾಜೀತ್ & ಪ್ರಕೃತಿಜೀತ್ ಸ್ವರೂಪ.

10. ನಾನು "ಸರ್ವದಾ ಸುಖ, ಶಾಂತಿ ಮತ್ತು ಪವಿತ್ರತೆ ನನ್ನ ಜನ್ಮ ಸಿದ್ಧ ಅದಿಕಾರ" ಎಂಬುದನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆ.

11. ನಾನು ಯಾವುದೇ ಮಾತಿನಿಂದ ಪ್ರಭಾವಿತವಾಗದೆ ಮಾತುಗಳ ಮೇಲೆ ನನ್ನ ಪ್ರಭಾವವನ್ನು ಹಾಕಬಲ್ಲೆನು.